

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ರಾಜ್ಯ ಸರ್ಕಾರ ಕೃಷಿ ಮತ್ತು ನೀರಾವರಿ ಕ್ಷೇತ್ರದಲ್ಲಿ ಇಟ್ಟಿರುವ ದಾಪುಗಾಲಿಗೆ ಇಡೀ ದೇಶದ ರೈತರೇ ಮೆಚ್ಚಿ 'ಅಹುದಹುದು' ಎನ್ನುತ್ತಿದ್ದಾರೆ. ಬರಗಾಲ ಮತ್ತು ಪ್ರತಿಕೂಲ ಹವಾಮಾನದ ಸವಾಲುಗಳನ್ನು ದಕ್ಷತೆಯಿಂದ ಎದುರಿಸಿರುವ ಸರ್ಕಾರ, ರೈತರ ಭೂಮಿಯನ್ನು ಹಸನುಗೊಳಿಸಲು ಭಗೀರಥ ಯತ್ನ ನಡೆಸಿದೆ. ಕಳೆದ ನಾಲ್ಕು ವರ್ಷಗಳಲ್ಲಿ 'ನುಡಿದಂತೆ ನಡೆದ' ಸರ್ಕಾರ, ಲಕ್ಷಾಂತರ ರೈತರ ಮುಖದಲ್ಲಿ ಮುಗುಳ್ನಗೆ ಮೂಡಿಸಿದೆ.

ಕಳೆದೆರಡು ವರ್ಷಗಳಿಂದ ರಾಜ್ಯದಲ್ಲಿ ಬರದ ಛಾಯೆ ಆವರಿಸಿದೆ. ಈ ಹಿನ್ನೆಲೆಯಲ್ಲಿ ರೈತರು ಸಹಕಾರ ಸಂಘಗಳಿಗೆ ಪಾವತಿಸಬೇಕಾಗಿದ್ದ ಕೃಷಿ ಸಾಲದ ಕಂತನ್ನು ಒಂದು ವರ್ಷದ ಅವಧಿಗೆ ಸರ್ಕಾರ ಮುಂದೂಡಿದೆ. ಜೊತೆಗೆ, 2 ಲಕ್ಷ ರೈತರ 45 ಕೋಟಿ ರೂಪಾಯಿಗಳಷ್ಟು ಬಡ್ಡಿಯನ್ನು ತಾನೇ ಭರ್ತಿ ಮಾಡಿದೆ. ಸರ್ಕಾರ 2016– 17ನೇ ಸಾಲಿಗೆ ಅನ್ವಯವಾಗುವಂತೆ ರಾಜ್ಯದ ರೈತರು ಸಹಕಾರಿ ಬ್ಯಾಂಕುಗಳಲ್ಲಿ ಮಾಡಿದ್ದ 50 ಸಾವಿರ ರೂಪಾಯಿವರೆಗಿನ ಬೆಳೆ ಸಾಲವನ್ನು ಮನ್ನಾ ಮಾಡಿದೆ. ಇದರಿಂದಾಗಿ 22.27 ಲಕ್ಷ ರೈತರ 8,165 ಕೋಟಿ ರೂ.ಗಳ ಸಾಲ ಮನ್ನಾಗೊಂಡಿದೆ.

ದೇಶದಲ್ಲಿಯೇ ಮೊದಲ ಬಾರಿಗೆ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 3 ಲಕ್ಷ ರೂಪಾಯಿವರೆಗೆ ಸಾಲ ನೀಡಲಾಗುತ್ತಿದೆ. ಇದರ ಜೊತೆಗೆ ಶೇ.3ರ ಬಡ್ಡಿ ದರದಲ್ಲಿ 10 ಲಕ್ಷ ರೂಪಾಯಿವರೆಗೆ ಸಾಲ ನೀಡುತ್ತಿರುವ ಏಕೈಕ ರಾಜ್ಯವಾಗಿದೆ.

ಸಹಕಾರ ಸಂಘಗಳ ಮೂಲಕ 2013–14ನೇ ಸಾಲಿನಲ್ಲಿ 16.7 ಲಕ್ಷ ರೈತರಿಗೆ 6560 ಕೋಟಿ ರೂಪಾಯಿಗಳ ಕೃಷಿ ಸಾಲವನ್ನು ವಿತರಿಸಲಾಗಿತ್ತು. ಹಾಗೆಯೇ 2016–17ನೇ ಸಾಲಿನಲ್ಲಿ ಸರಕಾರ 23.5 ಲಕ್ಷ ರೈತರಿಗೆ 11,500 ಕೋಟಿ ರೂಪಾಯಿಗಳ ಸಾಲವನ್ನು ನೀಡಿದೆ.

ರಾಜ್ಯದಲ್ಲಿರುವ 162 ಕೃಷಿ ಮಾರುಕಟ್ಟೆಗಳ ಪೈಕಿ 157 ಕೃಷಿ ಮಾರುಕಟ್ಟೆಗಳನ್ನು ಆನ್‌ಲೈನ್ ವ್ಯವಸ್ಥೆಗೆ ತರಲಾಗಿದೆ. ಇದರಿಂದ ಮಧ್ಯವರ್ತಿಗಳ ಹಾವಳಿ ತಪ್ಪಿದ್ದು, ನೇರವಾಗಿ ರೈತರು ಆನ್‌ಲೈನ್ ಮೂಲಕ ಮಾರಾಟ ಮಾಡುತ್ತಿದ್ದಾರೆ. ರೈತರ ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರಕುತ್ತಿದೆ. ಇದರಿಂದಾಗಿ ರಾಜ್ಯದ ರೈತರ ಆದಾಯ ಶೇಕಡಾ 38ರಷ್ಟು ಹೆಚ್ಚಿದೆ ಎಂದು ಕೇಂದ್ರ ನೀತಿ ಆಯೋಗವೇ ಮೆಚ್ಚುಗೆ ವ್ಯಕ್ತಪಡಿಸಿದೆ.

ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ತಲಾ 5 ಕೋಟಿ ರೂಪಾಯಿ ವೆಚ್ಚದಲ್ಲಿ ಗೋದಾಮು ನಿರ್ಮಾಣ, ಗದಗದಲ್ಲಿ ಈರುಳ್ಳಿ ಗೋದಾಮು ಸ್ಥಾಪನೆ; ಜಾನುವಾರು ಮಾರುಕಟ್ಟೆಗಳ ಸೌಲಭ್ಯಗಳ ಆಧುನೀಕರಣ ಮತ್ತು ತರಕಾರಿ ಮಾರುಕಟ್ಟೆಗಳಲ್ಲಿ ಅತ್ಯಾಧುನಿಕ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.

## ಉಕ್ಕಿ ಹರಿಯುತ್ತಿರುವ ಜಲಸಂಪನ್ಮೂಲ

ಜಲಸಂಪನ್ಮೂಲ ಇಲಾಖೆಯಲ್ಲೂ ಸರ್ಕಾರದ್ದು ಅಭೂತಪೂರ್ವ ಸಾಧನೆ. ದಾಖಲೆ ಮೊತ್ತವನ್ನು ವಿನಿಯೋಗಿಸಿ ಒಟ್ಟಾರೆ 68,264 ಹೆಕ್ಟೇರ್ ಪ್ರದೇಶಕ್ಕೆ